INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -02,March-April, 2026
Page No,24-31
Peer -Reviewed, Refereed Journal

# ಪದವಿ ಹಂತದಲ್ಲಿ ಮಾನವಿಕ ವಿಜ್ಞಾನಗಳ ವಿಷಯಗಳ ಅಧ್ಯಯನದಲ್ಲಿ ಇಳಿಮುಖವಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ– ಒಂದು ಸಮಾಜಶಾಸ್ತ್ರೀಯ ಅವಲೋಕನ

**ಡಾ.ಪೂರ್ಣಿಮ.ಬಿ.**[1]

ಪ್ರಾಚೀನ ಕಾಲದಿಂದಲೂ ಭಾರತೀಯ ಸಮಾಜದಲ್ಲಿ ಸಂಪ್ರದಾಯಿಕ ಶಿಕ್ಷಣಕ್ಕೆ ಮಾನ್ಯತೆ ಇದ್ದುದ್ದರ ಬಗ್ಗೆ ಇತಿಹಾಸದ ಪುಟಗಳಲ್ಲಿ ಮಾಹಿತಿ ದೊರೆಯುತ್ತದೆ. ಅತ್ಯಂತ ಪ್ರಾಚೀನ ವಿಶ್ವವಿದ್ಯಾನಿಲಯಗಳು ಎಂದು ಹೆಸರುಗಳಿಸಿದ್ದ ನಳಂದಾ ಮತ್ತು ತಕ್ಷಶಿಲಗಳಲ್ಲಿ ಸಂಪ್ರದಾಯಿಕ ಶಿಕ್ಷಣದ ವಿಷಯಗಳಾದ ತರ್ಕಶಾಸ್ತ್ರ, ಅರ್ಥಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಖಗೋಳಶಾಸ್ತ್ರ, ಸಮಾಜಶಾಸ್ತ್ರ ಇನ್ನೂ ಮೊದಲಾದ ವಿಷಯಗಳನ್ನು ಅಧ್ಯಯನ ಮಾಡಲಾಗುತ್ತಿತ್ತು. ಭಾರತಕ್ಕೆ ವಿದೇಶಿಗರ ಆಗಮನದಿಂದ 18ನೇ ಮತ್ತು 19ನೇ ಶತಮಾನಗಳಲ್ಲಿ ಅಧ್ಯಯನದ ವಿಷಯಗಳ ಪ್ರಾಧಾನ್ಯತೆ ಕಾಲ–ಕಾಲಕ್ಕೆ ಬದಲಾಗ ತೊಡಗಿತು ಬ್ರಿಟಿಷರು ತಮ್ಮ ಆಡಳಿತಾತ್ಮಕ ದೃಷ್ಟಿಯಿಂದ ಇಂಗ್ಲೀಷ್ ಭಾಷೆಯ ಶಿಕ್ಷಣವನ್ನು ಪರಿಚಯಿಸಿದರು. ಇದರ ಬೆನ್ನಲ್ಲೇ ಬ್ರಿಟಿಷರು ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ತತ್ವಶಾಸ್ತ್ರ, ಇನ್ನೂ ಮುಂತಾದ ವಿಷಯಗಳನ್ನು ಅಧ್ಯಯನಕ್ಕೆ ಅಳವಡಿಸಿದರು. ಕ್ರಮೇಣ ಮಾನವಿಕ ವಿಷಯಗಳು ಶಿಕ್ಷಣದ ಕ್ಷೇತ್ರವನ್ನು ಹೆಚ್ಚು ವಿಶಾಲಗೊಳಿಸಿ , ವಿಷಯಾಧಾರಿತವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗತೊಡಗಿದವು. ಅಷ್ಟೇ ಅಲ್ಲದೆ ಸುವ್ಯವಸ್ಥಿತ ಸಮಾಜದ ನಿರ್ಮಾಣಕ್ಕೆ ಕಾರಣಗಳಾದವು. ಆದರೆ ಇಂದಿನ ಆಧುನಿಕ ಭಾರತದಲ್ಲಿ ಅದರಲ್ಲೂ 21ನೇ ಶತಮಾನದಲ್ಲಿ ಮಾನವಿಕ ವಿಜ್ಞಾನಗಳ ವಿಷಯಗಳನ್ನು ಅಧ್ಯಯನ ಮಾಡುವಲ್ಲಿ ವಿದ್ಯಾರ್ಥಿಗಳ ನಿರಾಸಕ್ತಿ ಕಂಡು ಬರುತ್ತಿದೆ. ಪ್ರಸ್ತುತ ಸಂಶೋಧನಾ ಲೇಖನವು ಕರ್ನಾಟಕದಲ್ಲಿ ಮಾನವಿಕ ವಿಜ್ಞಾನಗಳ ಅಧ್ಯಯನದಲ್ಲಿ ಆಸಕ್ತಿ ಕಡಿಮೆಯಾಗಿ ವರ್ಷದಿಂದ ವರ್ಷಕ್ಕೆ ಗಣನೀಯ ಪ್ರಮಾಣದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಲು ಕಾರಣ, ಪರಿಣಾಮ ಮತ್ತು ಪರಿಹಾರಗಳನ್ನು ಹುಡುಕುವ ಪ್ರಯತ್ನ ಮಾಡಿದೆ.

ಮಾನವಿಕ ವಿಜ್ಞಾನಗಳು ಅತ್ಯಂತ ವಿಸ್ತಾರವಾದ ಶೈಕ್ಷಣಿಕ ವಿಷಯಗಳನ್ನು ಒಳಗೊಂಡಿದ್ದು ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಸಾಮಾಜಿಕ ಅಂತರ್ ಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು ಉತ್ತಮ

1 .**ಸಹಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ, ಹಾಸನ ಜಿಲ್ಲೆ**

ಅವಕಾಶಗಳನ್ನು ದೊರಕಿಸಿಕೊಟ್ಟಿವೆ. ಅದರಲ್ಲೂ ಪ್ರಮುಖವಾಗಿ ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಸಂಖ್ಯಾಶಾಸ್ತ್ರ, ತತ್ವಶಾಸ್ತ್ರ, ಮನೋವಿಜ್ಞಾನ, ದೈಹಿಕ ಶಿಕ್ಷಣ, ಮಾನವ ಶಾಸ್ತ್ರ, ಭೂಗೋಳಶಾಸ್ತ್ರ, ಕಾನೂನು, ಕನ್ನಡ, ಇಂಗ್ಲಿಷ್, ಸಂಸ್ಕೃತ, ಪಾಳಿ, ಜೈನಶಾಸ್ತ್ರ, ಪ್ರಾಕೃತ ವಿಜ್ಞಾನ, ಪತ್ರಿಕೋದ್ಯಮ, ಧರ್ಮಶಾಸ್ತ್ರ, ಶಿಕ್ಷಣ, ಗ್ರಂಥಾಲಯವಿಜ್ಞಾನ ಹೀಗೆ ಹಲವಾರು ಮಾನವಿಕ ವಿಜ್ಞಾನಗಳು ಭಾರತದಲ್ಲಿ ಪ್ರೌಢಶಾಲೆಯಿಂದ ಆರಂಭಿಸಿ ಸ್ನಾತಕೋತ್ತರ ಪದವಿಯವರೆಗೂ ಅಧ್ಯಯನ ಮಾಡಲಾಗುತ್ತಿದೆ. ಜೊತೆಗೆ ಮೇಲಿನ ಎಲ್ಲಾ ಕ್ಷೇತ್ರಗಳಿಗೂ ಅನುಕೂಲವಾಗುವಂತಹ ಫಲಿತಾಂಶವನ್ನು ಕೊಡುವ ಮೂಲಕ ವ್ಯಕ್ತಿಗಳಿಗೆ ವಿವಿಧ ಉದ್ಯೋಗದ ಅವಕಾಶಗಳನ್ನು ದೊರಕಿಸಿಕೊಡುತ್ತಿವೆ. ಸ್ವಾತಂತ್ರ್ಯಾ ನಂತರ ಅಖಿಲ ಭಾರತ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾರತೀಯ ಆಡಳಿತ ಸೇವೆಯೂ ಸೇರಿದಂತೆ ವಿವಿಧ ಸೇವೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಲ್ಲಿ ಮಾನವಿಕ ವಿಜ್ಞಾನಗಳನ್ನು ಆಯ್ಕೆ ಮಾಡಿಕೊಂಡು ಯಶಸ್ವಿಯಾಗಿರುವವರೇ ಹೆಚ್ಚು ಎಂಬ ಅಂಕಿ–ಅಂಶ ದೊರೆತಿದೆ. ವಿಶೇಷವೆಂದರೆ ತಾಂತ್ರಿಕ, ವೈದ್ಯಕೀಯ ಹಾಗೂ ಭೂತವಿಜ್ಞಾನಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದಿರುವವರೂ ಸಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮಾನವಿಕ ವಿಜ್ಞಾನಗಳನ್ನು ಐಚ್ಛಿಕ ವಿಷಯಗಳನ್ನಾಗಿ ಆಯ್ಕೆ ಮಾಡಿಕೊಂಡು ಯಶಸ್ವಿಯಾಗಿದ್ದಾರೆ. ಹೀಗಿದ್ದಾಗ್ಯೂ ಇತ್ತೀಚಿನ ದಿನಗಳಲ್ಲಿ ಮಾನವಿಕ ವಿಜ್ಞಾನಗಳನ್ನು ಪದವಿ ಹಂತದಲ್ಲಿ ಅಧ್ಯಯನ ಮಾಡಲು ವಿದ್ಯಾರ್ಥಿಗಳು ಮುಂದೆ ಬಾರದೆ ಇರುವುದು ಅಂಕಿ–ಅಂಶಗಳಿಂದ ದೃಢಪಟ್ಟಿದೆ. ಪ್ರಸ್ತುತ ಸಂಶೋಧನಾ ಲೇಖನವು ವಿದ್ಯಾರ್ಥಿಗಳು ಮಾನವಿಕ ವಿಜ್ಞಾನಗಳನ್ನು ಪದವಿ ಮಟ್ಟದಲ್ಲಿ ಅಧ್ಯಯನ ಮಾಡಲು ಆಯ್ಕೆ ಮಾಡಿಕೊಂಡು ಅಧ್ಯಯನ ಮುಂದುವರಿಸಲು ಏಕೆ ಹಿಂಜರಿಯುತ್ತಿದ್ದಾರೆ ಎಂಬುದರ ಮೇಲೆ ಬೆಳಕು ಚೆಲ್ಲಿದೆ.

**ಸಾಹಿತ್ಯ ಪರಾಮರ್ಶನ**

ಪೀಟರ್ ಮಾಂಡ್ಲೇಲ್ ರವರು 2015 ಜುಲೈ 7 ರಂದು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ 'Crisis of the humanities in comparative perspective' ವಿಷಯದ ಮೇಲೆ ಉಪನ್ಯಾಸ ನೀಡುವ ಸಂದರ್ಭದಲ್ಲಿ ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವಂತಹ ಮಾನವಿಕ ವಿಜ್ಞಾನಗಳ ಅಧ್ಯಯನ ಕಡಿಮೆಯಾಗುತ್ತಿದೆ ಎಂದು ಪ್ರಸ್ತಾಪಿಸಿದ್ದಾರೆ. ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆ (AIHES): ಮಾನವ ಸಂಪನ್ಮೂಲ ಇಲಾಖೆ ಮತ್ತು ಉನ್ನತ ಶಿಕ್ಷಣ ಶಿಕ್ಷಣ ಇಲಾಖೆ, ನ್ಯೂಡೆಲ್ಲಿ – 2016–17 ರಲ್ಲಿ ನಡೆಸಿದ ಸಮೀಕ್ಷೆಯ ವರದಿಯ ಪ್ರಕಾರ ಮಾನವಿಕ ವಿಜ್ಞಾನಗಳಿಗೆ ಪ್ರವೇಶಾತಿ ಕಡಿಮೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದೆ. ಕರ್ನಾಟಕದ ಉನ್ನತ ಶಿಕ್ಷಣ ಪರಿಷತ್ತಿನ ಸಮೀಕ್ಷೆ 2016–17 ರ ವರದಿಯಲ್ಲಿಯೂ ಕಲಾ ವಿಭಾಗಕ್ಕೆ ದಾಖಲಾತಿ ಹೆಚ್ಚಳಕ್ಕೆ ಕ್ರಮ ಕೈಗೊಳ್ಳುವ ಕುರಿತು ಗಂಭೀರವಾಗಿ ಚರ್ಚಿಸಿದೆ.

ಸಾಹಿತ್ಯ ಪರಾಮರ್ಶನ Review of literature a new report by the British Academy and the National Foundation for Education Research, ಮಾನವಿಕ ವಿಜ್ಞಾನಗಳಿಗೆ ಮತ್ತು ಸಾಮಾಜಿಕ ವಿಜ್ಞಾನಗಳ ವಿಷಯಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕುಸಿದಿದೆ ಇದರಿಂದ ಮುಂದಿನ ದಿನಗಳಲ್ಲಿ ಪದವೀಧರ ಸಂಖ್ಯೆಯ ಮೇಲೆ ಭಾರಿ ಗಾತ್ರದ ನಕಾರಾತ್ಮಕ ಪರಿಣಾಮವಾಗಲಿದೆ ಎಂದು ವರದಿ ಮಾಡಿದೆ.

inside higher Education Journal June 18/2024 ವೃತ್ತಿಪರ ಕೋರ್ಸುಗಳಿಗೆ ಸುಲಭ ಉದ್ಯೋಗ ಅವಕಾಶಗಳಿದ್ದರೆ, ಮಾನವ ವಿಜ್ಞಾನಗಳ ಅಧ್ಯಯನಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ಉದ್ಯೋಗದ ಭರವಸೆ ಇಲ್ಲದೆ ಇರುವುದು ಎಂದು ಉಲ್ಲೇಖಿಸಿದೆ.

India today March 19 2024 ದಿನಪತ್ರಿಕೆ, ಭಾರತದಂತಹ ದೇಶಗಳಲ್ಲಿ ವಿದ್ಯಾರ್ಥಿಗಳು ವಿಜ್ಞಾನ ಹಾಗೂ ವಾಣಿಜ್ಯ ವಿಷಯಗಳ ಕಡೆಗೆ ಹೆಚ್ಚು ಒಲವು ತೋರಿಸುತ್ತಿದ್ದಾರೆ. ಕಾರಣ ಮಾನವ ವಿಜ್ಞಾನಗಳು ಕಡಿಮೆ ಪ್ರಭಾವಶಾಲಿ ಎಂದು ತೀರ್ಮಾನಿಸಿದಂತಿದೆ. ಎಂದಿದೆ.

Support the Guardian 5 ಡಿಸೆಂಬರ್ 2024 ಜಾಗತಿಕ ಶಿಕ್ಷಣ ನೀತಿಯ ಪರಿಣಾಮಗಳು ಮಾನವ ವಿಜ್ಞಾನಗಳಿಗೆ ಕಡಿಮೆ ಮಟ್ಟದ ಸಂಪನ್ಮೂಲ ಹಂಚಿಕೆ ಮಾಡುತ್ತಿರುವುದರಿಂದ ವಿದ್ಯಾರ್ಥಿಗಳನ್ನು ಮಾನವಿಕ ವಿಭಾಗಕ್ಕೆ ಆಕರ್ಷಣೆ ಮಾಡಲು ಆಗುತ್ತಿಲ್ಲ ಎಂದು ಗುರುತಿಸಿದೆ.

China Daily September 2024 ಮಾನವ ವಿಜ್ಞಾನಗಳು ಇಂದಿನ ದಿನಗಳಲ್ಲಿ ಮರುಜನ್ಮ ತಾಳಬೇಕಾಗಿದೆ ಎಂದು ಉಲ್ಲೇಖಿಸಿದೆ.

**ಸಂಶೋಧನಾ ವಿಧಾನ**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಪ್ರಾಥಮಿಕ ಮೂಲಗಳಿಂದ ಅಂಕಿ ಅಂಶಗಳನ್ನು ಸಂಗ್ರಹಿಸಲಾಗಿದೆ ಹಾಗೂ ಅವಲೋಕನ ಮತ್ತು ಸಹಭಾಗಿ ಅವಲೋಕನ ಹಾಗೂ ಪ್ರಶ್ನಾವಳಿ ವಿಧಾನವನ್ನು ಅಳವಡಿಸಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ. ಮಾಧ್ಯಮಿಕ ಮೂಲಗಳಾದ ದಿನಪತ್ರಿಕೆಗಳು ವೃತ್ತ ಪತ್ರಿಕೆಗಳು ಮತ್ತು ಪುಸ್ತಕಗಳ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಸಂಶೋಧನಾ ಕೊರತೆಗಳು**

ಇದುವರೆವಿಗೆ ನಡೆದಿರುವ ಸಂಶೋಧನೆಗಳು ಮಾನವಿಕ ವಿಜ್ಞಾನಗಳಿಗೆ ವಿದ್ಯಾರ್ಥಿಗಳ ದಾಖಲಾತಿ ದಿನೇ ದಿನೇ ಕಡಿಮೆಯಾಗುತ್ತಿರುವ ಬಗ್ಗೆ ಎಲ್ಲಿಯೂ ಪ್ರಮುಖವಾಗಿ ಸಂಶೋಧನೆ ಕೈಗೊಂಡು ಕಾರಣಗಳನ್ನು ಪತ್ತೆ ಹಚ್ಚಿಲ್ಲ. ಈ ಸಂಶೋಧನಾ ಲೇಖನವು ಈ ಕೊರತೆ ತುಂಬುವ ಪ್ರಯತ್ನ ಮಾಡಿದೆ.

**ಪ್ರಾಕ್ ಕಲ್ಪನೆ**

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಪದವಿ ಹಂತದಲ್ಲಿ ಮಾನವಿಕ ವಿಷಯಗಳನ್ನು ಅಧ್ಯಯನ ಮಾಡಲು ನಿರಾಸಕ್ತಿ ತೋರಿಸುತ್ತಿದ್ದಾರೆ. ಉದ್ಯೋಗಾವಕಾಶಗಳು ಪ್ರತ್ಯೇಕವಾಗಿ ಮಾನವಿಕ ವಿಜ್ಞಾನಗಳಿಗೆ ಮೀಸಲಾಗಿಲ್ಲದೆ ಇರುವುದರಿಂದ ವಿದ್ಯಾರ್ಥಿಗಳ ನಿರಾಸಕ್ತಿ ಹೆಚ್ಚುತ್ತಿದೆ.

**ಕೋಷ್ಟಕ – 01**

ಹಾಸನ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟಿರುವ ಹಾಸನ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಹಾಗೂ ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2025–26ನೇ ಸಾಲಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳನ್ನು ತೋರಿಸುವ ಕೋಷ್ಟಕ.

| ಕ್ರಮ ಸಂಖ್ಯೆ | **ಕಾಲೇಜಿನ ವಿವರ** | **ಕಲಾ ವಿಭಾಗ B.A** | **ವಾಣಿಜ್ಯ ವಿಭಾಗ BCOM** | **ಬಿಬಿಎಂ B.B.M** | **ವಿಜ್ಞಾನ ವಿಭಾಗ B.S.C** |
|---|---|---|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಎಂಜಿ ರಸ್ತೆ ಹಾಸನ | 193 | 316 | 92 | 194 |
| 2 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಗಂಧದ ಕೋಟಿ | 45 | 84 | 21 | 55 |
| 3 | ಸರ್ಕಾರಿ ಗೃಹ ವಿಜ್ಞಾನ ಕಾಲೇಜು ಹಾಸನ | 52 | 95 | – | 167 |
| 4. | A.K ಕಾಂತಮ್ಮ ಮಹಿಳಾ ಕಾಲೇಜು ಹಾಸನ | 25 | 77 | – | 38 |
| 5 | N.D.R.K ಪ್ರಥಮ ದರ್ಜೆ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | 51 | – | 17 |
| 6 | ಆಚಾರ್ಯ ಪ್ರಥಮ ದರ್ಜೆ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | 48 | – | 46 |
| 7 | ಬೆಸ್ಟ್ ಪ್ರಥಮ ದರ್ಜೆ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | 74 | – | 52 |
| 8 | ಸೆಂಟ್ರಲ್ ಪ್ರಥಮ ದರ್ಜೆ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | 120 | – | 30 |
| 9 | ಜ್ಞಾನಧಾರೆ ಪ್ರಥಮ ದರ್ಜೆ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | 142 | – | ಪ್ರವೇಶಾತಿ ಇಲ್ಲ |
| 10 | ಹಾರನಹಳ್ಳಿರಾಮಸ್ವಾಮಿಇನ್ಸ್ಟಿಟ್ಯೂಷನ್ ಫಾರ್ ಹೈಯರ್ ಎಜುಕೇಶನ್ | ಪ್ರವೇಶಾತಿ ಇಲ್ಲ | 76 | – | ಪ್ರವೇಶಾತಿ ಇಲ್ಲ |
| 11 | ಫ್ರೆಂಡ್ ಪ್ರಥಮ ದರ್ಜೆ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | 124 | – | ಪ್ರವೇಶಾತಿ ಇಲ್ಲ |

| | | | | | |
|---|---|---|---|---|---|
| 12 | ಕುವೆಂಪು ಪ್ರಥಮ ದರ್ಜೆ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | 171 | – | ಪ್ರವೇಶಾತಿ ಇಲ್ಲ |
| 13 | ಸೆಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | 219 | – | 120 |
| 14 | ಸೆಂಟ್ ಫಿಲೋಮಿನಾ ಪ್ರಥಮ ದರ್ಜೆ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | 106 | – | 47 |
| 15 | ಸುಜಲ ಪ್ರಥಮ ದರ್ಜೆ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | 20 | – | ಪ್ರವೇಶಾತಿ ಇಲ್ಲ |
| 16 | ವಿದ್ಯಾಸೌಧ ಪ್ರಥಮ ದರ್ಜೆ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | 16 | – | 41 |
| 17 | ಸರ್ಕಾರಿ ಕಲಾ ಕಾಲೇಜು ಹಾಸನ | 314 | 223 | – | ಪ್ರವೇಶಾತಿ ಇಲ್ಲ |
| 18 | ಸರ್ಕಾರಿ ವಿಜ್ಞಾನ ಕಾಲೇಜು ಹಾಸನ | ಪ್ರವೇಶಾತಿ ಇಲ್ಲ | – | – | 987 |
| | ಒಟ್ಟು | 629 | 1962 | – | 1794 |

ಮೂಲ : 1. ಕುಲ ಸಚಿವರು ಹಾಸನ ವಿಶ್ವವಿದ್ಯಾಲಯ ಹಾಸನ.

2.ಪ್ರಾಂಶುಪಾಲರು,ಸರ್ಕಾರಿ ಕಲಾ ವಾಣಿಜ್ಯಹಾಗೂಸ್ನಾತಕೋತ್ತರ ಕಾಲೇಜು ಸ್ವಾಯತ್ತ ಹಾಸನ.

3. ಪ್ರಾಂಶುಪಾಲರು ಸರ್ಕಾರಿ ವಿಜ್ಞಾನ ಕಾಲೇಜು ಸ್ವಾಯತ್ತ ಹಾಸನ.

ಮೂಲ: ಹಾಸನ ವಿಶ್ವವಿದ್ಯಾಲಯ ನೀಡಿರುವ ಅಂಕಿ–ಅಂಶ

**ಮಾಹಿತಿಯ ವಿಶ್ಲೇಷಣೆ**

ಮೇಲ್ಕಂಡ ಕೋಷ್ಟಕವನ್ನು ಅವಲೋಕಿಸಿದಾಗ ಹಾಸನ ನಗರದ ಒಟ್ಟು 18 ಪದವಿ ಕಾಲೇಜುಗಳಿಗೆ 2025–26ನೇ ಸಾಲಿನಲ್ಲಿ ಕಲಾ ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಕ್ಕೆ ಒಟ್ಟು.4385 ವಿದ್ಯಾರ್ಥಿ ವಿದ್ಯಾರ್ಥಿನಿಯರು ದಾಖಲಾತಿ ಪಡೆದುಕೊಂಡಿರುವುದು ಸರಿಯಷ್ಟೇ, ಹಾಸನ ನಗರದ ಪ್ರಥಮ ದರ್ಜೆ ಕಾಲೇಜುಗಳು ಹಾಸನ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟಿವೆ. ಹಾಸನ ವಿಶ್ವವಿದ್ಯಾಲಯ ಹಾಸನ ಜಿಲ್ಲೆಯ ಭೌಗೋಳಿಕ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದು, ಈ ವಿಶ್ವವಿದ್ಯಾಲಯದ ಸಂಯೋಜನೆಗೆ ಹಾಸನ ಜಿಲ್ಲೆಯ 54 ಪ್ರಥಮ ದರ್ಜೆಯ ಕಾಲೇಜುಗಳು ಒಳಗೊಂಡಿವೆ. ಹಾಸನ ಜಿಲ್ಲೆಯ ಒಟ್ಟು 54 ಪ್ರಥಮ ದರ್ಜೆ ಕಾಲೇಜುಗಳ ಪೈಕಿ ಅತೀ ಹೆಚ್ಚು ಪ್ರಥಮ

ದರ್ಜೆ ಕಾಲೇಜುಗಳು ಅಂದರೆ 18 ಪ್ರಥಮ ದರ್ಜೆಕಾಲೇಜುಗಳು ಹಾಸನ ನಗರದಲ್ಲಿಯೇ ಕಾರ್ಯನಿರ್ವಹಿಸುತ್ತಿವೆ.

ಮೇಲ್ಕಂಡ ಅಂಕಿ ಅಂಶಗಳ ಪ್ರಕಾರ ಕಲಾ ವಿಭಾಗಕ್ಕೆ ಅತೀ ಕಡಿಮೆ ಸಂಖ್ಯೆಯ ಪ್ರವೇಶಾತಿ ಆಗಿರುವುದನ್ನು ಗಮನಿಸಬಹುದು. ಒಟ್ಟು 4385 ವಿದ್ಯಾರ್ಥಿಗಳಲ್ಲಿ ಕೇವಲ 629 ವಿದ್ಯಾರ್ಥಿಗಳು ಮಾತ್ರಕಲಾವಿ ಭಾಗಕ್ಕೆ ಪ್ರವೇಶಾತಿ ಪಡೆದಿರುವುದು ವಿಪರ್ಯಾಸ. ವಿಶೇಷವೆಂದರೆ ಹಾಸನ ಜಿಲ್ಲೆಯ ಇತರೆ 7 ತಾಲ್ಲೂಕುಗಳಲ್ಲೂ ಸಹ ಅಂದರೆ ಉಳಿದ 36 ಪ್ರಥಮ ದರ್ಜೆ ಕಾಲೇಜುಗಳಲ್ಲೂ ಸಹ ಕೇವಲ ವಾಣಿಜ್ಯ ವಿಭಾಗಕ್ಕೆ ಮಾತ್ರ ಹೆಚ್ಚಿನ ಪ್ರವೇಶಾತಿಯಾಗಿದೆಯೇ ಹೊರತು ಕಲಾ ವಿಭಾಗಕ್ಕೆ ಅಲ್ಲ, ವಿಜ್ಞಾನ ವಿಭಾಗದಲ್ಲಿ B.C.A (Bachular of Computer Application) ಗೆ ಮಾತ್ರ ಹೆಚ್ಚಿನ ಪ್ರವೇಶಾತಿಯಾಗಿದೆ. ಈ ಅಂಕಿ ಅಂಶಗಳಿಂದ ಸ್ಪಷ್ಟವಾಗಿ ಕಂಡುಬರುವುದೇನೆಂದರೆ ದಿನದಿಂದ ದಿನಕ್ಕೆ ಕಲಾವಿಭಾಗಕ್ಕೆ ವಿದ್ಯಾರ್ಥಿಗಳ ಪ್ರವೇಶಾತಿ ಕುಂಠಿತವಾಗಿ ಮಾನವಿಕ ವಿಜ್ಞಾನಗಳ ಅಧ್ಯಯನ ಕುಗ್ಗುತ್ತಿದೆ ಎಂಬುದು ಸ್ಪಷ್ಟವಾಗಿದೆ.

**ಕಂಡು ಕೊಂಡ ಅಂಶಗಳು** (Finding)

ವಿಜ್ಞಾನ ಮತ್ತು ವಾಣಿಜ್ಯ ಶಿಕ್ಷಣಕ್ಕೆ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಪೋಷಕರು ಹೆಚ್ಚು ಒತ್ತು ನೀಡುತ್ತಿದ್ದಾರೆ. ಮಾನವಿಕ ವಿಜ್ಞಾನಗಳಾದ ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಭೂಗೋಳಶಾಸ್ತ್ರ, ಇತಿಹಾಸ, ಪತ್ರಿಕೋದ್ಯಮ ಕನ್ನಡ, ಇಂಗ್ಲಿಷ್, ಸಂಸ್ಕೃತ ಇನ್ನಿತರ ಕಲಾ ನಿಕಾಯಗಳ ಅಧ್ಯಯನಕ್ಕೆ ಪ್ರಾಮುಖ್ಯತೆ ನೀಡುತ್ತಿಲ್ಲ.

ಕೋಷ್ಟಕ ದತ್ತಾಂಶಗಳ ವಿಶ್ಲೇಷಣೆಯ ಜೊತೆಗೆ ಸಹಭಾಗಿ ಅವಲೋಕನದ ಮೂಲಕ ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿದ ನಂತರ ಕೆಳಕಂಡ ಅಂಶಗಳು ಬೆಳಕಿಗೆ ಬಂದಿವೆ.

ಮಾನವಿಕ ವಿಭಾಗದ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಉದ್ಯೋಗಾವಕಾಶಗಳ ಬಗ್ಗೆ ಭಯವಿದ್ದು ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಬಹುಬೇಗ ಉದ್ಯೋಗಾವಕಾಶಗಳು ದೊರೆಯುತ್ತವೆ ಎಂಬ ತಪ್ಪು ಕಲ್ಪನೆ ಹೊಂದಿದ್ದಾರೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇಂಜಿನಿಯರಿಂಗ್ ವೈದ್ಯಕೀಯ ಹಾಗೂ ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಬೇಗ ಉದ್ಯೋಗಗಳು ಲಭಿಸುತ್ತದೆ ಎಂಬ ಧೋರಣೆ ಕಂಡು ಬಂದಿದೆ.ಸಾಮಾನ್ಯವಾಗಿ ಬುದ್ಧಿವಂತ ವಿದ್ಯಾರ್ಥಿಗಳು ಮಾತ್ರ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಕ್ಕೆ ಸೇರ್ಪಡೆಗೊಂಡು ದಡ್ಡರು ಮಾತ್ರ ಕಲಾವಿಭಾಗಕ್ಕೆ ಪ್ರವೇಶಾತಿ ಪಡೆಯುವರು ಎಂಬ ಭಾವನೆ ರೂಪಗೊಂಡಿದೆ.ಕಾಲೇಜು ಹಂತದಲ್ಲಿ ಸರಿಯಾದ ವೃತ್ತಿ ಮಾರ್ಗದರ್ಶನ ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ದೊರೆಯದೆ ಇರುವುದು ಬಹಿರಂಗಗೊಂಡಿದೆ. Railway Recruirment Board,Staff

Selection Commission, Union Public Service Commission, Karnataka Public Service Commission ,Karnataka Examination Authority ಇಂತಹ ಸಂಸ್ಥೆಗಳಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ದೊರೆಯುವ ಅವಕಾಶಗಳ ಬಗ್ಗೆ ಮಾಹಿತಿಯ ಕೊರತೆ ಎದ್ದು ಕಾಣುತ್ತಿದೆ.

ವಿದ್ಯಾರ್ಥಿಗಳ ಪೋಷಕರು ಸಹ ವಿದ್ಯಾರ್ಥಿಗಳ ಆಸಕ್ತಿ ಏನಿದೆ ಎಂಬುದಕ್ಕೆ ಆಸ್ಪದ ನೀಡದೆ ನಮ್ಮ ಆಸಕ್ತಿಯಂತೆ ನಮ್ಮ ಮಕ್ಕಳು ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಪದವಿ ಓದಬೇಕೆಂಬ ಪ್ರವೃತ್ತಿ ಹೆಚ್ಚಾಗಿರುವುದು ಕಂಡುಬಂದಿದೆ. ಇದರ ಪರಿಣಾಮವಾಗಿ ಪ್ರತಿಯೊಂದು ಸಮಾಜದಲ್ಲಿಯೂ ಸಮಾಜ ಶಾಸ್ತ್ರ ಇತಿಹಾಸ, ರಾಜ್ಯಶಾಸ್ತ್ರ, ಸಾಹಿತ್ಯ ಅಧ್ಯಯನಕ್ಕೆ ವಿದ್ಯಾರ್ಥಿಗಳ ಕೊರತೆ ದಿನ ಕಳೆದಂತೆ ಹೆಚ್ಚುತ್ತಿದ್ದು ಉತ್ತಮ ಆಡಳಿತ ನೀಡುವ ಸಮಾಜವನ್ನು ಸಾಮಾಜಿಕ ಸಂಬಂಧಗಳನ್ನು ಅರ್ಥ ಮಾಡಿಕೊಂಡು ಸಂಸ್ಕೃತಿಯನ್ನು ರೂಪಿಸುವ ಪ್ರಜ್ಞಾವಂತರ ಸಂಖ್ಯೆ ಕಡಿಮೆಯಾಗುತ್ತಿದೆ. ಸಾಮಾಜಿಕ ಮೌಲ್ಯಗಳು, ಮಾನವೀಯತೆಯು ಕುಗ್ಗುತ್ತಿದ್ದು ವಿಭಕ್ತ ಕುಟುಂಬಗಳ ಸ್ಥಾಪನೆ ಹೆಚ್ಚಾಗಿ ಕೊಲೆ, ಸುಲಿಗೆ, ದರೋಡೆ, ಲಂಚಗುಳಿತನ, ಭ್ರಷ್ಟಾಚಾರ ಸುಳ್ಳು, ಬಾಲಾಪರಾದ, ಒಂಟಿತನ, ವಿವಾಹ ರಹಿತ ಕುಟುಂಬ, ವಿವಾಹರಹಿತ ತಾಯಿಯಂತಹ ವಿವಾಹ ವಿಚ್ಛೇದನೆಯಂತಹ ಸಾಮಾಜಿಕ ಸಮಸ್ಯೆಗಳು ಹೆಚ್ಚಾಗುತ್ತಿವೆ.

**ಸಲಹೆಗಳು**

ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಕೇಂದ್ರ ಸರ್ಕಾರ 30 ರಾಜ್ಯ ಸರ್ಕಾರಗಳು ಮತ್ತು 7 ಕೇಂದ್ರಾಡಳಿತ ಪ್ರದೇಶಗಳು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ, ಉನ್ನತ ಶಿಕ್ಷಣ ಪರಿಷತ್, ನೀತಿ ಆಯೋಗ ಸಾಮಾಜಿಕ ಸುಧಾರಣಾ ಸಂಸ್ಥೆಗಳು, ಮಾನವಿಕ ವಿಜ್ಞಾನಗಳ ಅಧ್ಯಯನವನ್ನು ಪದವಿ ಹಂತದಲ್ಲಿ ಹೆಚ್ಚಿಸಲು ಆಕರ್ಷಕ ಯೋಜನೆಗಳನ್ನು ಪ್ರಕಟಿಸಬೇಕು. ಮಾನವಿಕ ವಿಜ್ಞಾನಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳಿಗೆ ಪ್ರತ್ಯೇಕ ವಿಷಯಾಧಾರಿತ ಉದ್ಯೋಗಾವಕಾಶಗಳಲ್ಲಿ ಮೀಸಲಾತಿ ಒದಗಿಸಿಕೊಡುವ ಮೂಲಕ ದಾಖಲಾತಿ ಹೆಚ್ಚಿಸಬೇಕು.

**ಪರಿಸಮಾಪ್ತಿ**

ಸಂಶೋಧನಾ ಲೇಖನದಲ್ಲಿ ಕಂಡುಕೊಂಡಿರುವಂತಹ ಅಂಶಗಳನ್ನು ವಿವೇಚಿಸಿದಾಗ ಘನ ಸರ್ಕಾರ ಕೂಡಲೇ ವರ್ಷದಿಂದ ವರ್ಷಕ್ಕೆ ಮಾನವಿಕ ವಿಜ್ಞಾನಗಳ ಪ್ರವೇಶಾತಿ ಇಳಿಮುಖವಾಗುತ್ತಿರುವ ಬಗ್ಗೆ ಉನ್ನತ ಮಟ್ಟದ ಅಧ್ಯಯನ ಸಮಿತಿಯನ್ನು ರಚಿಸಿ ಶಿಕ್ಷಣ ತಜ್ಞರನ್ನು ಅಧ್ಯಕ್ಷರು ಮತ್ತು ಸದಸ್ಯರನ್ನಾಗಿ ನೇಮಿಸಿ ವರದಿ ತಯಾರಿಸಿ ಕಾರಣ ಮತ್ತು ಪರಿಣಾಮಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಬೇಕು ಮತ್ತು ಸೂಕ್ತ ಯೋಜನೆಗಳನ್ನು ತರಬೇಕು. ಆರೋಗ್ಯವಂತ ಸಮಾಜದ ನಿರ್ಮಾಣ ಮಾಡುವಲ್ಲಿ ಮಾನವಿಕ ವಿಜ್ಞಾನಗಳ ವೈಶಿಷ್ಟ್ಯ ಹೆಚ್ಚಿಸಬೇಕು.

ಕಲಾ ವಿಭಾಗಕ್ಕೆ ವಿದ್ಯಾರ್ಥಿಗಳ ಪ್ರವೇಶ ಕುಂಠಿತಗೊಳ್ಳುತ್ತಿರುವುದು ಶಿಕ್ಷಣ ಕ್ಷೇತ್ರದ ಸಮಸ್ಯೆಯಲ್ಲ ಈ ಪ್ರವೃತ್ತಿ ಸಾಮಾಜಿಕ ಮನೋಭಾವ ಹಾಗೂ ಉದ್ಯೋಗ ಕೇಂದ್ರಿತ ದೃಷ್ಟಿಕೋನದಿಂದ ಉಂಟಾಗಿದೆ. ಯಾವುದೇ ಸಮಾಜದ ಸಮತೋಲನ ಅಭಿವೃದ್ಧಿಗೆ ವಿಜ್ಞಾನ, ವಾಣಿಜ್ಯ ಹಾಗೂ ಕಲೆ ಈ ಮೂರು ವಿಭಾಗಗಳ ಪಾತ್ರವು ಮುಖ್ಯವಾದವುಗಳಾಗಿವೆ. ಈ ದಿಸೆಯಲ್ಲಿ ಕ್ರಮಬದ್ಧವಾದ ಅರಿವು ಜಾಗೃತಿ ಹಾಗೂ ಮಾರ್ಗದರ್ಶನ ನೀಡಿದರೆ ಮುಂದಿನ ದಿನಗಳಲ್ಲಿ ಈ ಅಸಮತೋಲನವನ್ನು ಸರಿದೂಗಿಸಬಹುದು ಕಲಾವಿಭಾಗಕ್ಕೆ ಹೊಸ ಹೊಸ ನವೀನತೆ ಹೊಂದಿರುವ ಕೋರ್ಸುಗಳನ್ನು ಸೇರಿಸಬೇಕು ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಉದ್ಯೋಗ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಿ ತರಭೇತಿ ನೀಡಬೇಕು ಸಮಾಜದ ಮನೋಭಾವ ಕಲಾ ವಿಭಾಗದ ಅಧ್ಯಯನದ ಬಗ್ಗೆ ಬದಲಾಗಬೇಕು ಕಲಾವಿಭಾಗದ ಅಧ್ಯಯನ ನಡೆಸಿ ಯಶಸ್ವಿಯಾಗಿರುವ ವ್ಯಕ್ತಿಗಳನ್ನು ಪರಿಚಯಿಸುವ ಮೂಲಕ ಈ ವಿಭಾಗದ ಅಧ್ಯಯನದ ಆಸಕ್ತಿಯನ್ನು ಹೆಚ್ಚಿಸಬಹುದು.

## ಪರಾಮರ್ಶನ ಗ್ರಂಥಗಳು

1. ಅನ್ನ ಬಲಿ. "ಪ್ರಸೆಂಟ್ ಸಿನಾರಿಯೋ ಆಫ್ ಹೈಯರ್ ಎಜುಕೇಶನ್ ಇನ್ ಇಂಡಿಯನ್ ಸಿಸ್ಟಮ್ ಆಫ್ ಎಜುಕೇಶನ್ ಎ ನೀಡ್ ಟು ಇಂಪ್ರೂವ್ ಇಟ್ಸ್ ಕ್ವಾಲಿಟಿ" ಇಂಟರ್ ನ್ಯಾಷನಲ್ ಆಫ್ ರಿಸರ್ಚ್ ಜೂನ್ 2014.

2.ನಿತೀಶ್ ಸಂಕ್ಲೇಜಾ, "ಕರೆಂಟ್ ಸಿನಾರಿಯೋ ಆಫ್ ಹೈಯರ್ ಎಜುಕೇಶನ್ ಇನ್ ಇಂಡಿಯನ್" ಇಂಟರ್ ನ್ಯಾಷನಲ್ ಜರ್ನಲ್ ಆಫ್ ಎಂಜಿನಿಯರಿಂಗ್ ಟೆಕ್ನಾಲಜಿ ಸೈನ್ಸ್ ಅಂಡ್ ರಿಸರ್ಚ್ ವಾಲ್ಯೂಂ 4, ಆಗಸ್ಟ್ 2017.

3. ಪೀಟರ್ ಮಾಂಡ್ಲೇರ್, ದಿ ಕ್ರೈಸಿಸ್ ಆಫ್ ದಿ ಹ್ಯುಮ್ಯಾನಿಟೀಸ್ ಇನ್ ಕಂಪೆರಿಟಿವ್ ಪರ್ಸ್ಪೆಕ್ಟಿವ್ ಜುಲೈ 2015.

4. ಪ್ರಜಾವಾಣಿ ಪತ್ರಿಕೆ 05/02/2018.

5. ಮಿನಿಸ್ಟ್ರಿ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್ ಆಫ್ ಹೈಯರ್ ಎಜುಕೇಶನ್ ನ್ಯೂಡೆಲ್ಲಿ – 2015–16.

6. ಹೈಯರ್ ಎಜುಕೇಶನ್ ಇನ್ ಇಂಡಿಯಾ ಇಶ್ಯೂಸ್ ಅಂಡ್ ನ್ಯೂ ಡೈರೆಕ್ಷನ್ಸ್, ಯು.ಜಿ.ಸಿ ಸಲಹೆಗಳು.